
# ನಾಯಿಯ ಮಹಿಮೆ

ಮಲ್ಲಿಕಾರ್ಜುನ ಸುರಧೇನುಪುರ
ಕಲೆ: ಸಂತೋಷ್ ಸಸಿಹಿತ್ಲು



ಸುರಪುರದ ಪರಂಧಾಮಯ್ಯ ಅಂದರೆ ಶ್ರೀನಿವಾಸನ ಪರಮಭಕ್ತ. ಆತ ಬೇಸಾಯದ ಕೆಲಸದ ಜೊತೆಗೆ ಗ್ರಾಮದಲ್ಲಿ ಇದ್ದ ಭಜನಾ ಮಂಡಳಿಯ ಕಾರ್ಯಗಳಲ್ಲಿ ಶ್ರದ್ಧೆ ಮತ್ತು ಭಕ್ತಿಯಿಂದ ಸಕ್ರಿಯವಾಗಿ ಭಾಗವಹಿಸುತ್ತಿದ್ದ. ತನ್ನ ಜಮೀನಿನ ಕೆಲಸ ಕಾರ್ಯಗಳು ಇಲ್ಲದ ವೇಳೆ, ಅನ್ಯರ ಜಮೀನುಗಳಲ್ಲಿ ಕೂಲಿ ಕೆಲಸಕ್ಕೆ ಹೋಗುತ್ತಿದ್ದ. ಈತನ ಹೆಂಡತಿ ಕಮಲಮ್ಮ ಮನೆಗೆಲಸ ಮಾಡುವುದರಲ್ಲೇ ದಿನ ಕಳೆದು ಹೋಗುತ್ತಿತ್ತು. ಇಬ್ಬರು ಹೆಣ್ಣು ಮಕ್ಕಳು ಮತ್ತು ಒಂದು ಗಂಡು ಮಗು ಇದ್ದರು. ಜೀವನ ಹಾಗೂ ಹೀಗೂ ನಡೆಯುತ್ತಿತ್ತು. ಪರಂಧಾಮಯ್ಯನಿಗೆ ತಿರುಪತಿ ದರ್ಶನ ಮಾಡುವ ಮಹದಾಸೆ. ಆದರೆ ತನಗೆ ತಿಮ್ಮಪ್ಪ ದರ್ಶನ ಮಾಡುವ ಆಸೆಯಾದರೆ, ಮಡದಿಗೆ ಧರ್ಮಸ್ಥಳದ ಮಂಜುನಾಥನ ದರ್ಶನ ಮಾಡುವ ಆಸೆಯಿರಬಹುದು. ಮಕ್ಕಳಿಗೆ ಮಲೆಮಹದೇಶ್ವರನ ದರ್ಶನ ಆಸೆಯಿರಬಹುದು. ಹಾಗಾಗಿ ತನ್ನ ಜೀವಮಾನದ ಆಸೆಯನ್ನು ಯಾರಿಗೂ ಹೇಳದೆ ತನ್ನೊಳಗೆ ಇಟ್ಟುಕೊಂಡಿದ್ದ.

ಪಕ್ಕದ ಮಾರಸಂದ್ರ ಗ್ರಾಮದ ಶ್ರೀನಿವಾಸಮೂರ್ತಿ ಪ್ರವಾಸದ ಚೀಟಿ ವ್ಯವಹಾರ ಮಾಡುತ್ತಿದ್ದ. ಅಂದರೆ ತಿಂಗಳಿಗೆ ನೂರು ರೂಪಾಯಿಯನ್ನು ಐವತ್ತು ಜನರಿಂದ ಹಣ ಕಟ್ಟಿಸಿಕೊಂಡು, ಹನ್ನೆರಡು ತಿಂಗಳ ನಂತರ ತಿರುಪತಿ, ಕಾಳಹಸ್ತಿ, ಇನ್ನಿತರ ಯಾತ್ರಾ ಸ್ಥಳಗಳ ಪ್ರವಾಸ ಕಾರ್ಯಕ್ರಮ ಮಾಡುತ್ತಿದ್ದ, ಊಟ, ವಸತಿ ಅಚ್ಚುಕಟ್ಟಾಗಿ ಮಾಡುತ್ತಿದ್ದ, ಹಾಗಾಗಿ ಆತನ ನೇತೃತ್ವದಲ್ಲಿ ಪ್ರವಾಸ ಹೊರಡಲು ಜನ ಇಷ್ಟಪಡುತ್ತಿದ್ದರು. ಪರಂಧಾಮಯ್ಯ 'ಮನಸಿದ್ದರೆ ಮಾರ್ಗ' ಅಂತ ಧೈರ್ಯ ಮಾಡಿ ಆತನ ಬಳಿ ಪ್ರತಿ ತಿಂಗಳು ಐದು ನೂರು ಹಣ ಕಟ್ಟಲು ಆರಂಭಿಸಿದ. ಪರಿವಾರ ಸಮೇತ ತಿರುಪತಿ ತಿಮ್ಮಪ್ಪನ ದರ್ಶನ ಮಾಡಲು ನಿರ್ಧಾರ ಮಾಡಿದ.

ಪರಂಧಾಮಯ್ಯ ಪರಿವಾರ ಸಮೇತನಾಗಿ ತಿರುಪತಿ ತಿಮ್ಮಪ್ಪನ ದರ್ಶನಕ್ಕೆ ಹೊರಡಲು ಎರಡು ದಿನ ಉಳಿದಿತ್ತು. ಪರಂಧಾಮಯ್ಯ ಪ್ರೀತಿಯಿಂದ ಸಾಕಿದ್ದ ನಾಯಿ, ಮಗ ಗಿರಿವಾಸನ ಕಾಲಿಗೆ ಬಲವಾಗಿ ಕಚ್ಚಿತು. ಆರು ದಿನಗಳು ಚುಚ್ಚುಮದ್ದು ತೆಗೆದುಕೊಳ್ಳಬೇಕಾದ ಅನಿವಾರ್ಯತೆ ಉಂಟಾಯಿತು. ಕಮಲಮ್ಮ 'ನೀವು ಮತ್ತು ಹೆಣ್ಣು ಮಕ್ಕಳಿಬ್ಬರು ಹೋಗಿ ಬನ್ನಿ, ನಾನು ಮಗನಿಗೆ ಚುಚ್ಚುಮದ್ದು ಹಾಕಿಸಿಕೊಂಡು, ಆರೈಕೆ ಮಾಡಿಕೊಂಡಿರುತ್ತೇನೆ' ಎಂದು ಧೈರ್ಯ ತುಂಬಿದಳು. ಹೆಂಡತಿ ಮತ್ತು ಮಗನನ್ನು ಬಿಟ್ಟು ಪ್ರವಾಸ ಮಾಡಲು ಪರಂಧಾಮಯ್ಯನ ಮನಸ್ಸು ಒಪ್ಪಲಿಲ್ಲ. ಪ್ರವಾಸದ ದುಡ್ಡು ವಾಪಾಸ್ ಕೊಡಲು ಶ್ರೀನಿವಾಸಮೂರ್ತಿಯೂ ಒಪ್ಪಲಿಲ್ಲ. 'ಐದು ಸೀಟು ಖಾಲಿ ಹೊರಟರೆ ನನಗೆ ನಷ್ಟ, ಬೇರೆ ಯಾರನ್ನಾದರೂ ಕಳುಹಿಸು ಅವರಿಂದ ಹಣ ವಸೂಲಿ ಮಾಡಿಕೊ' ಎಂಬ ಸಲಹೆ ನೀಡಿದ್ದ. ಅದರಂತೆ ಪರಂಧಾಮಯ್ಯ ಅವರಿವರ ಮನವೊಲಿಸಿ ಗ್ರಾಮದ ಐದು ಜನರನ್ನು ಪ್ರವಾಸಕ್ಕೆ ಕಳುಹಿಸಿದ. ಪ್ರೀತಿಯ ನಾಯಿಯನ್ನು ನಾರಾಯಣನ ಸ್ವರೂಪ ಎಂದು ಭಾವಿಸಿದ್ದ ಪರಂಧಾಮಯ್ಯ ನಾಯಿಯನ್ನು ಮನ ಬಂದಂತೆ ಶಪಿಸತೊಡಗಿದ.

ಪ್ರವಾಸಕ್ಕೆ ಹೊರಟಿದ್ದ ಬಸ್ ಮೂರು ದಿನಗಳ ಯಶಸ್ವಿ ಪ್ರವಾಸ ಮುಗಿಸಿಕೊಂಡು ನಾಲ್ಕನೆಯ ದಿನ ರಾತ್ರಿ ಹಿಂತಿರುಗುವಾಗ ಪೆಟ್ರೋಲ್ ಟ್ಯಾಂಕರಿಗೆ ಮುಖಾಮುಖಿಯಾಗಿ ಡಿಕ್ಕಿ ಹೊಡೆಯಿತು. ಬಸ್ಸಿನಲ್ಲಿ ಇದ್ದ ಯಾತ್ರಿಕರು ಉರಿದು ಭಸ್ಮವಾದರು. ಆಗು ಹೋಗುಗಳೆಲ್ಲ ಶಿವನ ಅಣತಿಯಂತೆ ಅಂತ ನಂಬಿದ್ದ ಪರಂಧಾಮಯ್ಯನಿಗೆ ತಾನೇ ಸಾಕಿದ್ದ ನಾಯಿ ಯಾಕೆ ಕಡಿಯಿತು ಅಂತ ಅರ್ಥವಾಯಿತು. ನಾಯಿಯ ಬಗ್ಗೆ ಅಭಿಮಾನ ಮೊದಲಿಗಿಂತ ದುಪ್ಪಟ್ಟಾಯಿತು.